# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿನ ಬಾಕಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2016-17ನೇ ಸಾಲಿನಲ್ಲಿ ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲಾ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಕುರಿತು.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ: 222: ಎಫ್‌ಎನ್: 2016 ದಿ:01.04.2016.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಟಿ ಸಂಖ್ಯೆ:ಗ್ರಾಅಪ: 222: ಎಎಫ್‌ಎನ್:2016 ದಿ:20.04.2016.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:25: ಗ್ರಾವಿಯೋ: 2015, ದಿ: 29.08.2016

* * *

**ಪ್ರಸ್ತಾವನೆ:**

2016-17ನೇ ಸಾಲಿನಲ್ಲಿ ಆಯವ್ಯಯದಲ್ಲಿ ಪ್ರಗತಿಯಲ್ಲಿರುವ ಸುವರ್ಣ ಗ್ರಾಮೋದಯ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ 2014-15ನೇ ಸಾಲಿನಿಂದ ಆರಂಭವಾಗಿರುವ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಓದಲಾಗಿದೆ (1) ರಲ್ಲಿ ರೂ.440.00 ಕೋಟಿಗಳನ್ನು ಅನುದಾನವನ್ನು ಒದಗಿಸಿ, ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು - ರೂ. 286.00 ಕೋಟಿಗಳು
2. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ - ರೂ. 90.00 ಕೋಟಿಗಳು
3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ - ರೂ. 64.00 ಕೋಟಿಗಳು

**ಒಟ್ಟು - ರೂ. 440.00 ಕೋಟಿಗಳು**

ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಬಾಕಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುದಾನದ ಬೇಡಿಕೆಗೆ ಬಂದಿರುವ ಪ್ರಸ್ತಾವನೆಯನ್ನು ಮತ್ತು ಯೋಜನೆಯ ಪ್ರಗತಿಯನ್ನು ಸರ್ಕಾರ ಪರಿಶೀಲಿಸಿದೆ. ಅದರಂತೆ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಬಾಕಿ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಓದಲಾದ (3)ರಂತೆ ಮೈಸೂರು ಜಿಲ್ಲಾ ಪಂಚಾಯಿತಿಗಳಿಗೆ ಅನುಬಂಧದಲ್ಲಿರುವಂತೆ ರೂ. 231.00 ಲಕ್ಷ ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ.

ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ : 17 : ಸುಗ್ರಾಯೋ : 2016, ಬೆಂಗಳೂರು,**
**ದಿನಾಂಕ:29.12.2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅನುಬಂಧದಲ್ಲಿರುವಂತೆ

ಬಾಕಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ರೂ. 231.00 ಲಕ್ಷಗಳನ್ನು (ರೂಪಾಯಿ ಎರಡು ನೂರ ಮುವತ್ತೊಂದು ಲಕ್ಷಗಳು ಮಾತ್ರ) ಅನುದಾನವನ್ನು ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

| | | |
|---|---|---|
| 1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು | - ರೂ. | 150.15 ಲಕ್ಷಗಳು |
| 2.4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ | - ರೂ. | 47.35 ಲಕ್ಷಗಳು |
| 3.4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ | - ರೂ. | 33.50 ಲಕ್ಷಗಳು |
| | ಒಟ್ಟು ರೂ. | 231.00 ಲಕ್ಷಗಳು |

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳ ಅನುಮೋದಿತ ಗ್ರಾಮಾಭಿವೃದ್ಧಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮಾತ್ರ ವಿನಿಯೋಗಿಸುವುದು.

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು.

ಈ ಅನುದಾನವನ್ನು ಓದಲಾದ (2) ಮತ್ತು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ:3:ಟಿಎಫ್‌ಪಿ:2016, ದಿ: 02.04.2016 ರಲ್ಲಿ ಪ್ರತ್ಯಾಯೋಜಿಸಿದಂತೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು ಗ್ರಾಅಪ ರವರ ಗ್ರಾಅಪ:585:ಪಿಬಿಎಸ್:2016, ದಿನಾಂಕ: 21.11.2016 ರಲ್ಲಿ ನೀಡಿರುವ ಅಭಿಪ್ರಾಯದಂತೆ ಈ ಆದೇಶವನ್ನು ಹೊರಡಿಸಲಾಗಿದೆ.

**ಷರತ್ತುಗಳು :**

1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಈ ಅನುದಾನ ಬಿಡುಗಡೆ ಆದೇಶವನ್ನು ಪಡೆದ ಕೂಡಲೇ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡುವುದು ಮತ್ತು ಉಪಯುಕ್ತತಾ ಪತ್ರವನ್ನು ಕೂಡಲೇ ಸಲ್ಲಿಸುವುದು. ಬಿಡುಗಡೆಯಲ್ಲಿ ವಿಳಂಬ ನೀತಿಗೆ ಅವಕಾಶ ಕೊಡಬಾರದೆಂದು ಸೂಚಿಸಿದೆ ಮತ್ತು ಯೋಜನೆಯ ಸಮಗ್ರ ಉಸ್ತುವಾರಿಯನ್ನು ನಿರ್ವಹಿಸುವುದು ಹಾಗೂ ಪ್ರಗತಿಯ ವರದಿಯನ್ನು ಅನುಷ್ಠಾನಾಧಿಕಾರಿಗಳಿಂದ ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸುವುದು.
2. ಕಾಮಗಾರಿಗಳ ಬಿಲ್ಲುಗಳ ಹಣವನ್ನು ಪಾವತಿಸುವಾಗ ಪ್ರಗತಿಯ ಎಲ್ಲಾ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿದ ನಂತರವೇ ಬಿಲ್ಲುಗಳ ಪಾವತಿಗೆ ಕ್ರಮ ಕೈಗೊಳ್ಳತಕ್ಕದ್ದು.
3. ಮುಖ್ಯ ಇಂಜಿನಿಯರ್, ಪಿಆರ್‌ಇಡಿ / ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ರವರು ಸುವರ್ಣ ಗ್ರಾಮೋದಯ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು.
4. ಮುಖ್ಯ ಇಂಜಿನಿಯರ್, ಪಿಆರ್‌ಇಡಿ / ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ರವರು ಕಾರ್ಯಪಾಲಕ ಅಭಿಯಂತರರು, ಪಿಆರ್‌ಇಡಿ / ಉಪ ನಿರ್ದೇಶಕರು, ಕೆಆರ್‌ಐಡಿಎಲ್ ಇವರುಗಳಿಂದ ಕಾಮಗಾರಿಗಳ ಪ್ರಗತಿಯ ವರದಿಗಳನ್ನು ಪಡೆದು ಸರ್ಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸುವುದು.

5. ಅನುಷ್ಠಾನಾಧಿಕಾರಿಗಳು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ, ಮುಖ್ಯ ಇಂಜಿನಿಯರ್, ಪಿಆರ್‌ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ಇವರುಗಳಿಗೆ ಪ್ರತಿ ಮಾಹೆ ಸಲ್ಲಿಸುವುದು.

6. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸುವುದು.

7. ಅನುಷ್ಠಾನಾಧಿಕಾರಿಗಳು ಹಣ ಬಳಕೆಯ ಉಪಯುಕ್ತತಾ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ.ಬೂವನಹಳ್ಳಿನಾಗರಾಜ್)**
ನಿರ್ದೇಶಕರು (ಸುಗ್ರಾಯೋ, ರಸ್ತೆ & ಸೇತುವೆ)
ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು, (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (ಆಡಿಟ್ – 1 & 2) ಕರ್ನಾಟಕ, ಬೆಂಗಳೂರು.
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ.& ಪಂ.ರಾಜ್ ಇಲಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ. ರಾಜ್) ಗ್ರಾ.ಅ.& ಪಂ.ರಾಜ್ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು.
9. ಉಪ ಕಾರ್ಯದರ್ಶಿಗಳು / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ರವರಿಗೆ ಸೂಕ್ತ ಕ್ರಮಕ್ಕಾಗಿ
10. ಜಿಲ್ಲಾ ಖಜಾನಾಧಿಕಾರಿಗಳು ಜಿಲ್ಲಾ ಪಂಚಾಯತ್, ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ರವರಿಗೆ ಸೂಕ್ತ ಕ್ರಮಕ್ಕಾಗಿ
11. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12. ಮುಖ್ಯ ಅಭಿಯಂತರರು, ಪಿಆರ್‌ಇಡಿ / ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
13. ಉಪನಿರ್ದೇಶಕರು, ಖಜಾನೆ ಗಣಕ ಮಾಹಿತಿ ಜಾಲ, ಖನಿಜ ಭವನ, ಬೆಂಗಳೂರು.
14. ಖಜಾನೆಗಳ ಉಪ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
15. ಸರ್ಕಾರದ ಉಪಕಾರ್ಯದರ್ಶಿ (ಆಡಳಿತ) ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ, ಕಂಪ್ಯೂಟರ್ ಸೆಲ್, ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
16. ರಕ್ಷ ಕಡತಕ್ಕೆ/ಹೆಚ್ಚುವರಿ ಪ್ರತಿ.

# ಅನುಬಂಧ

2016-17ನೇ ಸಾಲಿಗೆ ಸುವರ್ಣ ಗ್ರಾಮೋದಯ ಯೋಜನೆಯಡಿ ಹಾವೇರಿ, ರಾಮನಗರ, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲಾ

ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ

(ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:17:ಸುಗ್ರಾಯೋ:2016,ಬೆಂಗಳೂರು. ದಿನಾಂಕ:29.12.2016)

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ ಮತ್ತು ವಿವರ | ಬಂಡವಾಳ ವೆಚ್ಚ | ಎಸ್‌ಸಿಪಿ | ಟಿಎಸ್‌ಪಿ | ಒಟ್ಟು |
|---|---|---|---|---|---|
| 1 | ಹಾವೇರಿ | 47.45 | 14.96 | 10.59 | 73.00 |
| 2 | ರಾಮನಗರ | 20.80 | 06.56 | 04.64 | 32.00 |
| 3 | ಮಂಡ್ಯ | 06.50 | 02.05 | 01.45 | 10.00 |
| 4 | ಶಿವಮೊಗ್ಗ | 05.20 | 01.64 | 01.16 | 08.00 |
| 5 | ಚಿತ್ರದುರ್ಗ | 24.70 | 07.79 | 05.51 | 38.00 |
| 6 | ಮೈಸೂರು | 45.50 | 14.35 | 10.15 | 70.00 |
| | ಒಟ್ಟು | 150.15 | 47.35 | 33.50 | 231.00 |

(ಡಾ.ಬೂವನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾಯೋ, ರಸ್ತೆ & ಸೇತುವೆ)
ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ